# ಬಾಸ್ಮತಿ ಸೇರಿ ಎಲ್ಲಾ ಅಕ್ಕಿ ಆಮದಿಗೆ ಚೀನಾ ಸಮ್ಮತಿ?

**ಬೀಜಿಂಗ್ :** ಬಾಸ್ಮತಿ ಜೊತೆ ಇತರ ತಳಿ ಅಕ್ಕಿಯನ್ನು ಮತ್ತೆ ಭಾರತದಿಂದ ಆಮದು ಮಾಡಿಕೊಳ್ಳಲು ಚೀನಾ ಶೀಘ್ರ ಸಮ್ಮತಿ ನೀಡುವ ಸಾಧ್ಯತೆ ಇದೆಯೆಂದು ಮೂಲಗಳು ತಿಳಿಸಿವೆ. ಭಾರತದ ಬಾಸ್ಮತಿ ಹೊರತಾದ ಅಕ್ಕಿಯ ಬ್ರಾಂಡ್‌ಗಳು ಚೀನಾದ ನಿಯಮ ಪಾಲಿಸಲು ವಿಫಲವಾಗಿವೆ ಎಂಬ ಕಾರಣಕ್ಕೆ ಇವುಗಳ ಆಮದಿಗೆ ಚೀನಾ ಮಾರುಕಟ್ಟೆಯಲ್ಲಿ ನಿರ್ಬಂಧ ಹೇರಲಾಗಿತ್ತು. ಇದಾದ ನಂತರದಲ್ಲಿ ಮತ್ತೆ ಮಾರುಕಟ್ಟೆ ಕಲ್ಪಿಸಿ ಕೊಡುವಂತೆ ಭಾರತ ಹಲವು ಬಾರಿ ಚೀನಾ ಬಳಿ ಮನವಿ ಮಾಡಿಕೊಂಡಿತ್ತು. ಮನವಿಗೆ ಸಮ್ಮತಿಸಿರುವ ಚೀನಾ ಅಧಿಕಾರಿಗಳು ಸೆಪ್ಟೆಂಬರ್ 19–28ರವರೆಗೆ ಭಾರತಕ್ಕೆ ಭೇಟಿ ನೀಡಲಿದ್ದಾರೆ. ರಾಷ್ಟ್ರೀಯ ಸಸ್ಯ ಸಂರಕ್ಷಣಾ ಸಂಘಟನೆ (ಎನ್‌ಪಿಪಿಒ) ಅಡಿಯಲ್ಲಿ ನೋಂದಣಿ ಹೊಂದಿರುವ 19 ಅಕ್ಕಿ ಮಿಲ್‌ಗಳಿಗೆ ಇವರು ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಬಾಸ್ಮತಿ ಹೊರತಾದ ಅಕ್ಕಿಯ ಜೊತೆಗೆ ಔಷಧ, ಹಣ್ಣು ಮತ್ತು ತರಕಾರಿಗಳಿಗೂ ಚೀನಾ ಮಾರುಕಟ್ಟೆಯಲ್ಲಿ ಅವಕಾಶ ನೀಡುವಂತೆ ಮನವಿ ಮಾಡಿಕೊಳ್ಳಲಾಗಿತ್ತು. ಭಾರತದಿಂದ ಬಾಸ್ಮತಿ ಅಕ್ಕಿ ಆಮದು ಮಾಡಿಕೊಳ್ಳಲು ಚೀನಾ 2012ರಲ್ಲಿ ಒಪ್ಪಿಗೆ ಸೂಚಿಸಿತ್ತು. – ಏಜೆನ್ಸೀಸ್.